ಕರ್ನಾಟಕ ವಿಧಾನ ಪರಿಷತ್ತು

1)	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	218
2)	ಸದಸ್ಯರ ಹೆಸರು	ಶ್ರೀ ಎಸ್. ವಿ. ಸಂಕನೂರ (ಪದವೀಧರರ ಕ್ಷೇತ್ರ)
3)	ಉತ್ತರಿಸಬೇಕಾದ ದಿನಾಂಕ	11.07.2018
4)	ಉತ್ತರಿಸುವವರು	ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಕೌಶಲ್ಯ ಕರ್ನಾಟಕ ಯೋಜನೆಯು ಕೇಂದ್ರ ಸರ್ಕಾರದ ಸ್ಕಿಲ್ ಇಂಡಿಯ ಯೋಜನೆಯ ಒಂದು ಭಾಗವೇ;	ಇಲ್ಲ.
	ಕೌಶಲ್ಯ ಕರ್ನಾಟಕ ಯೋಜನೆಯ ಕಾರ್ಯಕ್ರಮಗಳೇನು; ಕೌಶಲ್ಯ ಕರ್ನಾಟಕ ಯೋಜನೆಗೆ ಕಾಯ್ದಿರಿಸಿದ ಅನುದಾನವೆಷ್ಟು ಇದರಲ್ಲಿ ಕೇಂದ್ರ ಮತ್ತು ರಾಜ್ಯದ ಪಾಲು ಎಷ್ಟು;	2017-18 ನೇ ಸಾಲಿನಲ್ಲಿ ಎಲ್ಲಾ ಕೌಶಲ್ಯ ತರಬೇತಿ ಕಾರ್ಯಕ್ರಮಗಳನ್ನು ಒಂದೆಡೆ ತಂದು 5 ಲಕ್ಷಗಳ ಗುರಿಯೊಂದಿಗೆ ಮುಖ್ಯ ಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯನ್ನು ಎರಡು ವಾಹಿನಿಗಳಲ್ಲಿ ಪ್ರಾರಂಭಿಸಲಾಯಿತು.

ವಾಹಿನಿ 1– 2.50 ಲಕ್ಷ ತರಬೇತಿ ನೀಡುವ ಗುರಿ. ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಅನದಾನದಿಂದ ಈ ಕೆಳಗಿನ ಇಲಾಖೆಗಳ/ಸಂಸ್ಥೆಗಳ ಮೂಲಕ ನೇರವಾಗಿ ತರಬೇತಿಯನ್ನು ಕೈಗೊಳ್ಳುವುದು. (ರೂ. ಕೋಟಿಗಳಲ್ಲಿ)

ಕ್ರಮ ಸಂಖ್ಯೆ:	ಯೋಜನೆ/ ಸಂಸ್ಥೆ	ಆಯವ್ಯಯ		ಒಟ್ಟು
		ರಾಜ್ಯದ ಪಾಲು	ಕೇಂದ್ರದ ಪಾಲು	
1	ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ	117.00	–	117.00
2	ಡಿಡಿಯು–ಜಿಕೆವೈ	4.00	6.00	10.00
3	ಆರ್‌ಜಿಸಿವೈ	20.00	–	20.00
4	ಪಿ.ಎಂ.ಕೆ.ವಿ.ವೈ	–	52.48	52.48
5	ಕೌಶಲ್ಯ ತರಬೇತಿ ಮೂಲಕ ಉದ್ಯೋಗ ಮತ್ತು ಸ್ಥಳ ನಿಯುಕ್ತಿ– ಡೇ–ನಲ್ಮ್	16.84	11.23	28.07
6	ಕೌಶಲ್ಯ ಮಿಷನ್	200.00	–	200.00
	ಒಟ್ಟು	**357.84**	**69.71**	**427.55**

ವಾಹಿನಿ 2– 2.5 ಲಕ್ಷ ತರಬೇತಿ ನೀಡುವ ಗುರಿಯೊಂದಿಗೆ ಇತರೆ ಇಲಾಖೆಗೆ ಒದಗಿಸಲಾದ ಅನುದಾನದಿಂದ ತರಬೇತಿಯನ್ನು ಕೈಗೊಳ್ಳುವುದು.

(ರೂ. ಕೋಟಿಗಳಲ್ಲಿ)

ಕ್ರಮ ಸಂಖ್ಯೆ:	ಇಲಾಖೆ/ ನಿಗಮ	ಆಯವ್ಯಯ		ಒಟ್ಟು
		ರಾಜ್ಯದ ಪಾಲು	ಕೇಂದ್ರದ ಪಾಲು	
1	ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ	10.80	–	10.80
2	ಸಮಾಜ ಕಲ್ಯಾಣ	74.56	–	74.56
3	ಗಿರಿಜನ ಕಲ್ಯಾಣ	35.00	–	35.00

4	ಅಲ್ಪಸಂಖ್ಯಾತರ ಕಲ್ಯಾಣ	20.00	–	20.00
5	ಕೆ.ಎಮ್.ಡಿ.ಸಿ.	0.34	–	0.34
6	ಕೈಮಗ್ಗ ಮತ್ತು ಜವಳಿ	26.04	–	26.04
7	ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ	4.16	–	4.16
8	ಪ್ರವಾಸೋದ್ಯಮ	4.97	–	4.97
	ಒಟ್ಟು	175.87		175.87

ಆ)	ಕೌಶಲ್ಯ ಕರ್ನಾಟಕ ಯೋಜನೆಯಡಿ ತರಬೇತಿ ಮತ್ತು ಉದ್ಯೋಗಕ್ಕಾಗಿ ಇಲ್ಲಿಯವರೆಗೆ ನೋಂದಣಿ ಮಾಡಿಕೊಂಡ ಅಭ್ಯರ್ಥಿಗಳ ಸಂಖ್ಯೆ ಎಷ್ಟು;	ಮುಖ್ಯ ಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿಯಲ್ಲಿ ತರಬೇತಿಗಾಗಿ Kaushalkar.com web portal ನಲ್ಲಿ ದಿನಾಂಕ: 05.07.2018ರವರೆಗೆ 8.46 ಲಕ್ಷ ಅಭ್ಯರ್ಥಿಗಳು ನೋಂದಣಿ ಮಾಡಿಸಿಕೊಂಡಿರುತ್ತಾರೆ
ಇ)	ಯಾವ ಯಾವ ತರಬೇತಿ ಮತ್ತು ಉದ್ಯೋಗಗಳನ್ನು ನೀಡಲಾಗುವುದು: ರಾಜ್ಯದ ಎಲ್ಲೆಲ್ಲಿ ತರಬೇತಿ ಆಯೋಜಿಸಲಾಗುವುದು ; ತರಬೇತಿ ಮತ್ತು ಉದ್ಯೋಗ ನೀಡಲು ಯಾವ ಯಾವ ಸರ್ಕಾರೇತರ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆ;	ವಿವರಗಳನ್ನು ಅನುಬಂಧ-01.1ಎ,1ಬಿ,1ಸಿ ಮತ್ತು 1ಡಿ ರಲ್ಲಿ ಲಗತ್ತಿಸಲಾಗಿದೆ.
ಈ)	ತರಬೇತಿಯನ್ನು ಯಾವಾಗ ಪ್ರಾರಂಭಿಸಲಾಗುವುದು ಉದ್ಯೋಗವನ್ನು ಯಾವಾಗ ನೀಡಲು ಉದ್ದೇಶಿಸಲಾಗಿದೆ? ತರಬೇತಿ ಅಯ್ಕೆಯಾಗುವ ಅಭ್ಯರ್ಥಿಗಳಿಗೆ ಯಾವ ಸೌಲಭ್ಯಗಳನ್ನು ಒದಗಿಸಲಾಗುವುದು:	ಅಧಿಕಾರಯುಕ್ತ ಸಮಿತಿಯಿಂದ ಅನುಮೋದನೆಗೊಂಡಿರುವ ಕೌಶಲ್ಯ ತರಬೇತಿಗಳನ್ನು ಮಾರ್ಚ್ 2018 ರಿಂದ ಪ್ರಾರಂಭಿಸಲಾಗಿದೆ. ವಾಹಿನಿ-1 ರಡಿ 87,737 ಅಭ್ಯರ್ಥಿಗಳಿಗೆ ತರಬೇತಿಯನ್ನು ಪೂರ್ಣಗೊಳಿಸಲಾಗಿದ್ದು 56,160 ಅಭ್ಯರ್ಥಿಗಳಿಗೆ ಉದ್ಯೋಗ ನಿಯುಕ್ತಿಗೊಳಿಸಲಾಗಿದೆ. ವಾಹಿನಿ-2 ರಡಿ 63,198 ಅಭ್ಯರ್ಥಿಗಳಿಗೆ ತರಬೇತಿಯನ್ನು ಪೂರ್ಣಗೊಳಿಸಲಾಗಿದ್ದು 20,760 ಅಭ್ಯರ್ಥಿಗಳಿಗೆ ಉದ್ಯೋಗ ನಿಯುಕ್ತಿಗೊಳಿಸಲಾಗಿದೆ. ಇನ್ನುಳಿದ ಅಭ್ಯರ್ಥಿಗಳ ತರಬೇತಿಯು ಪ್ರಗತಿಯಲ್ಲಿದೆ. ತರಬೇತಿಯನ್ನು ಉಚಿತವಾಗಿ ನೀಡಲಾಗುವುದು.

ಸಂಖ್ಯೆ: ಕೌಉಜೀಇ 31 ಕೌಗುಪ್ರ 2018

(ಆರ್.ವಿ.ದೇಶಪಾಂಡೆ)
ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಮತ್ತು ಜೀವನೋಪಾಯ ಇಲಾಖೆಯ ಸಚಿವರು

ಅನುಬಂಧ -01

ಅ)	ಕೌಶಲ್ಯ ಮಿಷನ್	• ಎನ್.ಎಸ್.ಡಿ.ಸಿ/ಎಂ.ಎಸ್.ಡಿ.ಇ ವತಿಯಿಂದ ಅನುಮೋದಿಸಿದ 400 ಜಾಬ್ ರೋಲ್‌ಗಳು ಹಾಗೂ ರಾಜ್ಯ ಸರ್ಕಾರದ ವಿವಿಧ ಕೌಶಲ್ಯ ತರಬೇತಿ ಸಂಸ್ಥೆಗಳ 331 ಜಾಬ್ ರೋಲ್‌ಗಳು ಸೇರಿ ಒಟ್ಟು 731 ಜಾಬ್ ರೋಲ್‌ಗಳ ಅಡಿಯಲ್ಲಿ ತರಬೇತಿ ನೀಡಿ ಉದ್ಯೋಗವನ್ನು ಪಡೆದು ಕೊಳ್ಳಲು ಅವಕಾಶಮಾಡಿಕೊಡಲಾಗುವುದು. ವಿವರಗಳನ್ನು **"ಅನುಬಂಧ-1ಎ"** ರಲ್ಲಿ ಲಗತ್ತಿಸಿದೆ. • ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ ಸಂಸ್ಥೆಗಳ ಮೂಲಕ ತರಬೇತಿ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದು. 1.ಗೋಪಾಲನ್ ಸ್ಕಿಲ್ ಅಕಾಡೆಮಿ,2. ಒರಿಯನ್ 3.ಸಪ್ತ 4.ಬಿಜಿಎಸ್ 5.ಇಂಡಸ್ ವೆಲ್ಡ್ ಟೆಕ್,6.ಪಾಮುಜೆ ,7.ಜೆಎಸ್‌ಎಸ್ ಇನ್‌ಸ್ಟ್ಯೂಟ್ ಆಫ್ ಸ್ಕಿಲ್ & ಎಕ್ಸಲೆನ್ಸ್ ,8.ಅನನ್ಯ ಗ್ರಾಮಿಣ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ,9. ಮ್ಯಾಂಡ್‌ಮಸ್, 10. ಇಂಡಸ್ ಟ್ರಿ ಕ್ರಾಫ್ಟ್ ಫೌಂಡೆಷನ್,11.ಎಸಿಸಿಪಿಎಲ್,12.ಎಆರ್‌ಟಿಜೆಎಸ್,13.ಟಾಲೆಂಟ್ ರಿಸರ್ಚ ಫೌಂಡೇಶನ್ • ಸರ್ಕಾರದಿಂದ ಅನುಮೋದನೆಗೊಂಡಿರುವ ಸರ್ಕಾರಿ ಹಾಗೂ ವಿವಿಧ ಸರ್ಕಾರೇತರ ಕೌಶಲ್ಯ ತರಬೇತಿ ಸಂಸ್ಥೆಗಳಿಂದ ರಾಜ್ಯಾಂದ್ಯಂತ ಕೌಶಲ್ಯ ತರಬೇತಿಯನ್ನು ನಡೆಸಲಾಗುವುದು. ವಿವರಗಳನ್ನು **"ಅನುಬಂಧ-1ಎ"** ರಲ್ಲಿ ಲಗತ್ತಿಸಿದೆ.
ಆ)	ಜಿಟಿಟಿಸಿ	ತರಬೇತಿಗಳ ವಿವರ ಮತ್ತು ತರಬೇತಿ ಕೇಂದ್ರಗಳ ವಿವರಗಳನ್ನು **"ಅನುಬಂಧ-1ಬಿ"** ರಲ್ಲಿ ಅಡಕಗೊಳಿಸಲಾಗಿದೆ
ಇ)	ಸಂಜೀವಿನಿ ಕೆ.ಎಸ್.ಆರ್.ಎಲ್.ಪಿ.ಎಸ್	ತರಬೇತಿ ಮತ್ತು ಉದ್ಯೋಗ ಹಾಗೂ ತರಬೇತಿ ಸಂಸ್ಥೆಗಳ ವಿವರಗಳನ್ನು **"ಅನುಬಂಧ-1ಸಿ"** ರಲ್ಲಿ ಲಗತ್ತಿಸಿದೆ.
ಈ)	ಡೇ-ನಲ್ಮ್ ಯೋಜನೆ	ಕೇಂದ್ರ ಸರ್ಕಾರದವರು 302 ವಿವಿಧ ತರಬೇತಿ ವಿಷಯಗಳನ್ನು ತಿಳಿಸಿದ್ದು, ಅದರಂತೆ ತರಬೇತಿ ಕಾರ್ಯಕ್ರಮಗಳನ್ನು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ ಆಯೋಜಿಸಲಾಗುವುದು. ವಿವರಗಳನ್ನು **"ಅನುಬಂಧ-1ಡಿ"** ರಲ್ಲಿ ಅಡಕಗೊಳಿಸಲಾಗಿದೆ • 2015-16ನೇ ಸಾಲಿನಲ್ಲಿ ಸರ್ಕಾರೇತರ ಸಂಸ್ಥೆಗಳಾದ, 1)ಮೇ॥ಸ್ಯಾನ್ ಐ.ಟಿ ಸೊಲ್ಯೂಷನ್ಸ್ ಪ್ರೈ. ಲಿ.,2)ಮೇ॥ರೂಮನ್ ಟೆಕ್ನಾಲಜೀಸ್ ಪ್ರೈ. ಲಿ.,3)ಮೇ॥ವಿಶ್ವಗಂಗಾ ಎಜುಕೇಷನಲ್ & ರೂರಲ್ ಡೆವೆಲಪ್‌ಮೆಂಟ್ ಟ್ರಸ್ಟ್, 4)ವುಮೆನ್ ಲಿಬರೇಷನ್ & ರಿಹ್ಯಾಬುಲಿಟೇಷನ್ ಸೊಸೈಟಿ.,5)ಲಾರಸ್ ಎಜುಟೆಕ್ ಪ್ರೈ. ಲಿ., ಹಾಗೂ 6)ಶ್ರೀ ಅಮರೇಶ್ವರ ಗ್ರಾಮೀಣಾಭಿವೃದ್ಧಿ ಸಂಸ್ಥೆ ರವರುಗಳ ಮುಖಾಂತರ ಒಪ್ಪಂದ ಮಾಡಿಕೊಂಡು ತರಬೇತಿಗಳನ್ನು ಆಯೋಜಿಸಲು ಕ್ರಮ ವಹಿಸಲಾಗಿರುತ್ತದೆ.

		• 2016–17ನೇ ಸಾಲಿನಲ್ಲಿ ಯಾವುದೇ ಸರ್ಕಾರೇತರ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡಿರುವುದಿಲ್ಲ. • 2017–18ನೇ ಸಾಲಿನಲ್ಲಿ ಮಂಜೂರಾದ ಗ್ರಾಸ್‌ರೂಟ್ ಲೆವೆಲ್ ಸಪೋರ್ಟ್ ಆರ್ಗನೈಸೇಷನ್ ಸಂಸ್ಥೆಯವರಿಗೆ ತರಬೇತಿಗಳನ್ನು ಆಯೋಜಿಸಲು ಕಾರ್ಯಾದೇಶ ನೀಡಲಾಗಿರುತ್ತದೆ. 2018–19ನೇ ಸಾಲಿಗೆ ಸಂಬಂಧಿಸಿದಂತೆ, ತರಬೇತಿ ಕಾರ್ಯಕ್ರಮಗಳನ್ನು ಸರ್ಕಾರೇತರ ಸಂಸ್ಥೆಗಳ ಮೂಲಕ ಆಯೋಜಿಸಲು ಟೆಂಡರ್ ಆಹ್ವಾನಿಸಲಾಗಿದ್ದು, ಪ್ರಕ್ರಿಯೆಯು ಹಂತದಲ್ಲಿರುತ್ತದೆ.